ಈ) ಸರ್ಕಾರ ಸಂಘದ ಷೇರುದಾರರುಗಳ ಕಷ್ಟವನ್ನು ಅರಿತಿದೆಯೇ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಮಂತ್ರಿಗಳು):

ಅ) ಹೌದು.

ಆ) ಹೌದು.

ಇ) ಇದ ಹೊಸದಾಗಿ ಭೂಸ್ವಾಧೀನಪಡಿಸುವ ಬಗ್ಗೆ ಇರುತ್ತದೆ. ಸಂಘಗಳಿಗಾಗಿ ಮತ್ತಾವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಬಾರದೆಂಬುದಾಗಿ ಸರ್ಕಾರ ನಿರ್ಧರಿಸುವುದರಿಂದ ಮತ್ತು ಈ ವಿಷಯ ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಯಲ್ಲಿರುವುದರಿಂದ ಯಾವ ಕ್ರಮವನ್ನು ಈ ಬಗ್ಗೆ ತೆಗೆದುಕೊಳ್ಳಲಾಗುವುದಿಲ್ಲ.

ಈ) ಹೌದು, ಆದರೆ ಮೇಲೆ ವಿವರಿಸಿದ ಪರಿಸ್ಥಿತಿಯಿಂದಾಗಿ ಯಾವ ಕ್ರಮವನ್ನೂ ತೆಗೆದುಕೊಳ್ಳಬರುವುದಿಲ್ಲ.

ಬಿಜಾಪುರ ಜಿಲ್ಲೆಯಲ್ಲಿ ಶೀತಲಗೃಹ ಹಾಗೂ ಸಂಸ್ಕರಣ ಘಟಕ ಸ್ಥಾಪನೆ

210 - ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯು ತೋಟಗಾರಿಕೆ ಬೆಳೆಗಳಾದ ದ್ರಾಕ್ಷಿ, ಬಾಳೆ, ದಾಳಿಂಬೆ ಮತ್ತು ಲಿಂಬೆ ಇತ್ಯಾದಿ ಹಣ್ಣಿನ ಬೆಳೆಗಳ ಉತ್ಪತ್ತಿಗೆ ಪ್ರಖ್ಯಾತಿ ಪಟ್ಟಿರುವುದು ತಿಳಿದಿದೆಯೇ? ಹಾಗಿದ್ದಲ್ಲಿ, ಜಿಲ್ಲೆಯಲ್ಲಿ ಹಣ್ಣು ಮತ್ತು ತರಕಾರಿಗಳ ಬೆಳೆಗಾರರಿಗೆ ಅನುಕೂಲ ಒದಗಿಸಲು ಶೀತಲಗೃಹ ಹಾಗೂ ಸಂಸ್ಕರಣ ಘಟಕ ಸ್ಥಾಪಿಸುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):

ಅ) ಹೌದು, 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಉದ್ದೇಶಿತ ಸಮಗ್ರ ಕೃಷಿ ಅಭಿವೃದ್ಧಿ ಯೋಜನೆಯ ಅಂಗವಾಗಿ ಬಿಜಾಪುರ ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿ ಆರಿಸಿಕೊಂಡು, ತೋಟಗಾರಿಕೆ ಬೆಳೆಗಳ ಅಭಿವೃದ್ಧಿ ಮತ್ತು ರಫ್ತಿನ ಯೋಜನೆ ಅಡಿಯಲ್ಲಿ ಶೀತಲ ಗೃಹ ಹಾಗೂ ಸಂಸ್ಕರಣ ಘಟಕಗಳನ್ನು ಸ್ಥಾಪಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಬೇತಮಂಗಲ ಪಶುವೈದ್ಯ ಆಸ್ಪತ್ರೆ

480 - ಶ್ರೀ ಎಂ. ನಾರಾಯಣಸ್ವಾಮಿ(ಬೇತಮಂಗಲ): ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾರಾಜ್ಯ ಸಚಿವರು ಈ ಕೆಳಕಂಡಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಗಾರಪೇಟೆ ತಾಲ್ಲೂಕು ಬೇತಮಂಗಲದಲ್ಲಿ ಪಶುವೈದ್ಯ ಆಸ್ಪತ್ರೆಯನ್ನು ಪ್ರಸ್ತುತ ವರ್ಷ ತೆರೆಯುವ ಆಲೋಚನೆ ಸರ್ಕಾರಕ್ಕಿದೆಯೇ?

ಆ) ಇದ್ದರೆ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಸವರಾಜ ಪಾಟೀಲ್(ಪಶು ಸಂಗೋಪನಾ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.